ವೀಳ್ಯದ ಜೊತೆಗೆ ನೋಟುಗಳು ತುಂಬಿದ್ದ ಒಂದು ಬಿಳಿ ಲಕೋಟೆಯನ್ನವರು ಗುರುಕಾಣಿಕೆಯಾಗಿ ಅರ್ಪಿಸಬಂದಾಗ, 'ತೆಗೆಯಿರಿ, ಈ ಲಕೋಟೆಯನ್ನಾಚೆ ತೆಗೆಯಿರಿ. ನಾನು ಬರೀ ಹಣ್ಣುಗಳನ್ನು ಮಾತ್ರ ಸ್ವೀಕರಿಸುತ್ತೇನೆ' ಎಂದು ಬಿಟ್ಟಿದ್ದು ಅವರಿಗೇ ಅಚ್ಚರಿ. ಹಾಗೇನೂ ಅವರು ಎಲ್ಲರ ಬಳಿಯೂ ಹಣವನ್ನು ಸ್ವೀಕರಿಸದೇ ಇಲ್ಲ. ತಾವ್ಯಾಕೆ ಹಾಗೆಂದೆವೆಂದು ಅವರೇ ಗೊಂದಲಕ್ಕೊಳಗಾದರು. ಮರುಕ್ಷಣವೇ, 'ನಾಳೆಕಾಲಕ್ಕೆ ಈ ಶಿಷ್ಯೆ ನನ್ನ ಘರಾಣದ ಹೆಸರು ಹೇಳುವವಳು. ಸಾಕ್ಷಾತ್ ಸರಸ್ವತಿಯೇ ಇವಳ ಕಂಠಸ್ಥಳಾಗಿದ್ದಾಳೆ. ನಾನು ನಿಮಿತ್ತ. ಸರಿಯಾದ ಗುರುವನ್ನು ಶಿಷ್ಯರು ಹುಡುಕುವಂತೆ ಸರಿಯಾದ ಶಿಷ್ಯರನ್ನು ಗುರುವೂ ಹುಡುಕುತ್ತಿರುತ್ತಾನೆ. ಈ ದಿನ ನನಗೆ ಅಂಥದ್ದೊಂದು ಅಪೂರ್ವ ಗಳಿಗೆ; ನಾನು ಅರಸುತ್ತಿದ್ದ ಶಿಷ್ಯೆ ನನ್ನ ಬಾಗಿಲಿಗೆ ಬಂದಿದ್ದಾಳೆ. ಸಂಗೀತ ಸರಸ್ವತೀ ಸ್ವರೂಪಿಯಾಗಿ' ಎಂದು ಭಾವುಕರಾಗಿ ನುಡಿದೂ ಬಿಟ್ಟಿದ್ದರು. ಅವರಿಗೇ ಅಚ್ಚರಿ, ಯಾವುದೋ ದೈವ ತನ್ನ ನಾಲಿಗೆಗೆ ಬಂದು ಈ ಮಾತನಾಡಿಸಿರಬೇಕು ಎಂದು ಅವರು ಭಾವಿಸಿದರು. ಅದನ್ನು ಇಲ್ಲಿವರೆಗೆ ಹಾಗೇ ನಂಬಿದ್ದಾರೆ ಕೂಡ. ಮೊದಮೊದಲು ಎಲ್ಲರ ಜೊತೆಗೇ ಪಾಠ ಅಭ್ಯಾಸ ನಡೆಯುತ್ತಿತ್ತು. ವಿದ್ವತ್ ತರಗತಿಗಳಿಗೆ ಮಾತ್ರ ಅವರು ಖುದ್ದಾಗಿ ಹೇಳಿಕೊಡುತ್ತಿದ್ದರು. ಉಳಿದವರಿಗೆ ಅವರ ಹಿರಿಯ ವಿದ್ಯಾರ್ಥಿಗಳೇ ಕಲಿಸುತ್ತಿದ್ದರು. ವಿದ್ವತ್ ತರಗತಿಯಲ್ಲೂ ಬೇರೆಯವರ ಜೊತೆ ನೀನಾ ಚೌಧರಿಯ ಪಾಠ ಅವರಿಗೆ ಕಷ್ಟವೆನಿಸತೊಡಗಿತು. ಎಲ್ಲರೂ ನಾಕು ಮಾರು ನಡೆವಷ್ಟರಲ್ಲಿ ಅವಳು ನಲವತ್ತು ಮಾರು ಮುಂದಿರುತ್ತಿದ್ದಳು. ಕಡೆಗೆ ಅವಳ ಪಾಠ, ಅಭ್ಯಾಸಗಳಿಗೆ ಪ್ರತ್ಯೇಕ ವೇಳೆಯನ್ನು ನಿಗದಿಪಡಿಸಿದರು. ಮೊದಲು ಎರಡು ತಿಂಗಳು ತಾವಿದ್ದ ಮನೆಗೆ ಹತ್ತಿರದಲ್ಲೇ ಇದ್ದ ಅಪಾರ್ಟ್‌ಮೆಂಟಲ್ಲಿ ವಾಸ್ತವ್ಯವಿದ್ದಳು. ಅಕಸ್ಮಾತ್ತಾಗಿ ಅವರ ಮನೆಯ ಹಿಂಬದಿಯ ಔಟ್‌ಹೌಸ್ ತೆರವಾಗಿ ಅವಳಿಗೆ ಅಲ್ಲೇ ಬಂದು ಇರಲಿಕ್ಕೆ ಹೇಳಿದರು. ಸಂತೋಷದಿಂದ ಒಪ್ಪಿಕೊಂಡಳು. ಬಾಡಿಗೆಯೇನೂ ಬೇಡವೆಂದುಬಿಟ್ಟರು. ಅವಳದನ್ನೂ ಕೃತಕೃತ್ಯತೆಯಿಂದ ಒಪ್ಪಿಕೊಂಡು ಅಲ್ಲೇ ಇರತೊಡಗಿದಳು. ಬೆಳಿಗ್ಗೆ ಬ್ರಾಹ್ಮಿ ಮುಹೂರ್ತದ ರಿಯಾಜ್ ಅವಳು ತಪ್ಪಿಸುವಂತೆಯೇ ಇರಲಿಲ್ಲ. ಅವಳು ಎದ್ದಿಲ್ಲದೇ ಇದ್ದ ಪಕ್ಷಕ್ಕೆ ಸ್ವಯಂ ಗಾಯಕವಾಡರೇ ಅವಳ ಮನೆ ಕಾಲಿಂಗ್‌ಬೆಲ್ ಮಾಡಿ ರಿಯಾಜ್‌ಗೆ ಕೂರಿಸಿ ತಾವು ಅಲ್ಲೇ ಹತ್ತಿರವೇ ಕುಳಿತು ಆನಂದಿಸುತ್ತಾ, ಕೆಲವೊಮ್ಮೆ ತಪ್ಪುಗಳನ್ನು, ಓರೆಕೋರೆಗಳನ್ನು ತಿದ್ದುತ್ತಿದ್ದರು.

ಬ್ರಾಹ್ಮಿ ಮುಹೂರ್ತದಲ್ಲಿ ಶುರುವಾಗುತ್ತಿದ್ದ ಅವಳ ಅಭ್ಯಾಸ ಒಂದೂವರೆ ಗಂಟೆಯವರೆಗೆ ಅವ್ಯಾಹತವಾಗಿ ಸಾಗುತ್ತಿತ್ತು. ನಂತರ ಅವಳ ಗೃಹಕೃತ್ಯ. ಆಮೇಲೆ ಅವರ ಬೈಠಕ್ ಖಾನೆಯಲ್ಲಿ ಅವರೊಡನೆ ಕುಳಿತು ರಾಗಗಳ ಕುರಿತು ಘರಾಣಗಳ ನಡುವಿನ ಅಂತರಗಳ ಕುರಿತು ಚರ್ಚೆ ಕೆಲವೇಳೆ ಖ್ಯಾತನಾಮರ ಗ್ರಾಮಾಫೋನ್ ಪ್ಲೇಟುಗಳ ಆಲಿಸುವಿಕೆ... ಹೀಗೆ ಅವರಿಬ್ಬರ ಇಡೀ ಬದುಕೇ ಸಂಗೀತದಲ್ಲಿ ಲೀನವಾಗಿರುತ್ತಿತ್ತು. ಮಧ್ಯಾಹ್ನ ನಾಲ್ಕು ಗಂಟೆಯವರೆಗೆ ವಿದ್ವತ್ ವಿದ್ಯಾರ್ಥಿಗಳ ಪಾಠ, ನಂತರ ಏಕಾಂತದಲ್ಲಿ ಅವಳ ಪಾಠ ಆರಂಭವಾಗಬೇಕು. ಅವರದೆಷ್ಟು ತನ್ಮಯವಾಗಿ ಹೇಳಿಕೊಡುತ್ತಿದ್ದರೆಂದರೆ... ಆ ಸಮಯ ಸಣ್ಣ ಸದ್ದನ್ನೂ ಅಡಚಣೆಯನ್ನು ಅವರು ಸಹಿಸುತ್ತಿರಲಿಲ್ಲ. ನಿಧಾನವಾಗಿ ಅವರ ಕಛೇರಿಗಳಿಗೂ ಅವಳು ತಂಬೂರಿ ಮೀಟುತ್ತಾ ಜೊತೆಯಾಗತೊಡಗಿದಳು.

ಹೀಗಿರಲಾಗಿ. ಅವಳೊಮ್ಮೆ ತನ್ನ ಊರಿಗೆ ಹೋಗಿಬರಬೇಕೆಂದಾಗ, 'ಎಷ್ಟು ದಿನಕ್ಕೆ?' ಎಂದು ಸಹಜವಾಗಿ ಕೇಳಿದರು. 'ಹತ್ತು ದಿನಗಳ ಮಟ್ಟಿಗೆ' ಎಂದಳು. ಅದೇನು? ಎನ್ನುವಂತೆ ಹುಬ್ಬೇರಿಸಿದರು. ಯಾವ ಲಜ್ಜೆಯೂ ಇಲ್ಲದೆ ತನ್ನ ತಾಯ್ತಂದೆಯರು ತನ್ನ ಮದುವೆಗಾಗಿ